# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ:ಕರಾಮುವಿ/ಪವಿ/5.1/ಎಂ.ಎ.ಎಂ.ಕಾಂ,ಎಲ್ಲಾ ಎಂ.ಎಸ್ಸಿ/ಪ.ಪ/117/2019-20. ದಿನಾಂಕ:-19-08-2020

## ಅಧಿಸೂಚನೆ

**ವಿಷಯ:- 2018-19ನೇ ಸಾಲಿನಲ್ಲಿ ಪ್ರಥಮ ವರ್ಷ/ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದು ಅನುತ್ತೀರ್ಣ/ಪರೀಕ್ಷೆ ತೆಗೆದುಕೊಂಡಿಲ್ಲದ ಎಂ.ಎ/ಎಂ.ಕಾಂ ಹಾಗೂ ಎಂ.ಎಸ್ಸಿ ಪದವಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸುವ ಬಗೆಗೆ.**

**ಉಲ್ಲೇಖ:- ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13-08-2020.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018-19ನೇ ಸಾಲಿನಲ್ಲಿ ಪ್ರಥಮ ವರ್ಷ/ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದು ಅನುತ್ತೀರ್ಣ/ಪರೀಕ್ಷೆ ತೆಗೆದುಕೊಂಡಿಲ್ಲದ ಎಂ.ಎ/ಎಂ.ಕಾಂ ಹಾಗೂ ಎಂ.ಎಸ್ಸಿ ಪದವಿಗಳ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ತಿಳಿಸಲಾಗಿದೆ.

ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆಗಳನ್ನು ನಿಗಧಿಪಡಿಸಲಾಗಿದ್ದು, ಈ ಸಂಬಂಧ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.inನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ **(Online)** ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ **9663482133, 9663482311** ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ: | **19-08-2020** |
| ದಂಡ ಶುಲ್ಕವಿಲ್ಲದೆ ಪಾವತಿಗೆ ಕಡೆ ದಿನಾಂಕ: | **31-08-2020** |
| ರೂ.200/- ದಂಡ ಶುಲ್ಕದೊಂದಿಗೆ ಪಾವತಿಗೆ ಕಡೆ ದಿನಾಂಕ: | **10-09-2020** |

1. **2020 ಸಾಲಿನಲ್ಲಿ ಪ್ರಾರಂಭವಾಗುವ ಎಂ.ಎ/ಎಂ.ಕಾಂ ಹಾಗೂ ಎಂ.ಎಸ್ಸಿ ಪದವಿಯ ಪರೀಕ್ಷಾ ದಿನಾಂಕಗಳ ವೇಳಾಪಟ್ಟಿಯನ್ನು ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.in ಪ್ರಕಟಿಸಲಾಗುವುದು.**
2. **ಎಂ.ಎಸ್ಸಿ ಪದವಿಗಳಿಗೆ ಮೈಸೂರು ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷೆಯನ್ನು ನಡೆಸಲು ನಿಗಧಿಪಡಿಸಿದೆ.**
3. **ಎಂ.ಎ/ಎಂ.ಕಾಂ ಪದವಿಗಳಿಗೆ ಪರೀಕ್ಷೆಗಳನ್ನು ಈ ಕೆಳಕಂಡ ಕೇಂದ್ರಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ.**

**ಬೆಂಗಳೂರು, ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ, ಹಾಸನ, ಕಲಬುರ್ಗಿ, ಕೋಲಾರ. ಮಂಡ್ಯ, ಮೈಸೂರು, ಮಂಗಳೂರು, ಶಿವಮೊಗ್ಗ, ತುಮಕೂರು, ಉಡುಪಿ,**

**ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ಕೋಷ್ಟಕ**

| ಕ್ರಮ ಸಂಖ್ಯೆ | ಪದವಿಗಳು | ಪೂರ್ಣಪರೀಕ್ಷೆಗೆ | ಒಂದು ಪತ್ರಿಕೆಗೆ | ಎರಡು ಪತ್ರಿಕೆಗೆ | ಮೂರಕ್ಕಿಂತ ಹೆಚ್ಚು ಪತ್ರಿಕೆಗೆ |
|---|---|---|---|---|---|
| 01 | ಎಂ.ಎ/ಎಂ.ಕಾಂ | ರೂ. 1,200/- | 500/- | 700/- | 1200/- |
| 02 | ಎಂ.ಎಸ್ಸಿ ಪದವಿಗಳು | ರೂ. 2,000/- | 700/- | 1000/- | 2000/- |

## ಸೂಚನೆಗಳು

1. ಕೇಂದ್ರ/ರಾಜ್ಯ ಸರ್ಕಾರವು ಆಗಿಂದ್ದಾಗೆ ಹೊರಡಿಸುವ ಕೋವಿಡ್-19 ನಿರ್ವಹಣೆಯ ನಿಯಮಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
2. ಅಂತರ್ಜಾಲ (**Online**)ದಲ್ಲಿ ಪರೀಕ್ಷಾ ಅರ್ಜಿ ಭರ್ತಿ ಮಾಡಿ ಶುಲ್ಕ ಪಾವತಿಸಿದ ನಂತರ ಬರುವ ವಿವರದ ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ) ಕರಾಮುವಿ, ಮುಕ್ತ ಗಂಗೋತ್ರಿ, ಮೈಸೂರು-06 ಇಲ್ಲಿಗೆ ಕಡ್ಡಾಯವಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸತಕ್ಕದ್ದು.
3. ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷೆಗೆ ತರುವುದು.
4. ವಿದ್ಯಾರ್ಥಿಯು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ಹೊಂದಿರತಕ್ಕದ್ದು.
5. ವಿವಿ ನಿಲಯಕ್ಕೆ ನೇರವಾಗಿ / ಅಂಚೆ ಮೂಲಕ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
6. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
7. ಪುನರಾವರ್ತಿತ ವಿದ್ಯಾರ್ಥಿಗಳಾಗಿರುವುದರಿಂದ ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ.
8. ವಿದ್ಯಾರ್ಥಿಗಳು ಚಾಲ್ತಿಯಲ್ಲಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ಯೋಜನೆಗೆ ಅನುಗುಣವಾಗಿ ಪರೀಕ್ಷೆ ತೆಗೆದುಕೊಳ್ಳಬೇಕು.
9. ವಿದ್ಯಾರ್ಥಿಗಳು ತಮ್ಮ ಎಂ.ಎ/ಎಂ.ಕಾಂ ಮತ್ತು ಎಂ.ಎಸ್ಸಿ ಪದವಿ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.in ನಿಂದ ಪಡೆಯಬಹುದಾಗಿದೆ.
10. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮೊಬೈಲ್ ಫೋನ್ ಪರೀಕ್ಷಾ ಕೇಂದ್ರಗಳಿಗೆ ತರುವುದು ದುರ್ನಡತೆ (Malpractice) ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತದೆ.
11. ಎಂ.ಎಸ್ಸಿ ಪದವಿಗಳ ಪ್ರಾಯೋಗಿಕ ಪರೀಕ್ಷೆಯ ಬಗೆಗೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

**ಸಹಿ**/-

**ಕುಲಸಚಿವರು**(**ಪರೀಕ್ಷಾಂಗ**)

**ಗೆ,**

1. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸುವಂತೆ ಕ್ರಮವಹಿಸುವುದು.
2. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು,ಕರಾಮುವಿ.